<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

**SC No**.145/2020

**PW**. 4

**CW**. 8

**ಸಾಕ್ಷಿಯ ಹೆಸರು –ಸಂಪತ್ತಕುಮಾರ**

**ತಂದೆಯ ಹೆಸರು –ಅನಂತರಾಮ್ ಗೋಳಿ**

**ವಯಸ್ಸು –54 ವರ್ಷಗಳು** ದಿನಾಂಕ 05–02–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಖಾಸಗಿ ಕೆಲಸ**

**ವಾಸಸ್ಥಳ –ಬ್ರಾಹ್ಮಣರ ಬೀಧಿ ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಈಗ್ಗೆ 5–6 ವರ್ಷಗಳ ಹಿಂದೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಪರಿಚಿತ ಗಂಡಸಿನ ಕೊಲೆ ಬಗ್ಗೆ ಗೊತ್ತಾಗಿ, ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಪೊಲೀಸರು ಸದರಿ ಶವದ ಪಂಚನಾಮೆ ಮಾಡಿ, ನನ್ನ ಸಹಿ ಪಡೆದರು. ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಶವವು ಕೊಳೆತ ಸ್ಥಿತಿಯಲ್ಲಿತ್ತು. ಪೊಲೀಸರು ಅಸಹಜ ಸಾವು ಎಂದು ಪ್ರಕರಣ ದಾಖಲು ಮಾಡಿಕೊಂಡರು. ಸದರಿ ಪಂಚನಾಮೆಗೆ ನಾನು , ಚಾಸಾ–7 ಮತ್ತು 9 ರವರು ಸಹಿ ಮಾಡಿದ್ದೇವೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಕೆ ಎಸ್ ವಕೀಲರಿಂದಃ–**

ಪಂಚನಾಮೆಗೆ ಬರಲು ಪೊಲೀಸರು ನೋಟೀಸ್ ನೀಡಿಲ್ಲ ಎಂದರೆ ಸರಿ . ಪೊಲೀಸರ ಕೋರಿಕೆಯ ಮೇರೆಗೆ ನಿಪಿ–**2** ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ–**2** ರಲ್ಲಿ ಬರೆದ

ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ . ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.